# ಜೀಬನ್ ನಾರಾ ಅವರ ಗದ್ಯ ಬರಹ

## ಸಾವಿನ ಭಯ ಮತ್ತು ಕೊನೆಯಿರದ ದುಃಖ

(ಜೀಬನ್ ನಾರಾ ಅವರ 'ಭೂಮೀರ್ ಫೂಲ್' ಪುಸ್ತಕದಿಂದ)

**ಅಬನರೀ ನದಿ ಒಣಗುವುದೇ ಇಲ್ಲ**
**ಮನುಜರ ದುಃಖಕ್ಕೂ ಕೊನೆಯಿಲ್ಲ.**
**ಅಮ್ಮಾ, ನಮ್ಮಂಥ ಜೀವಿಗಳು**
**ಒಂಟಿತನದ ಶಾಪ ಹೊತ್ತವರು, ಇಂದಿಗೂ, ಎಂದೆಂದಿಗೂ**

(ಮಿಸಿಂಗ್ ಜನಪದ ಕಾವ್ಯದ ಲಾವಣಿ)

ಕಬ್ಬಿಣದಷ್ಟು ಗಟ್ಟಿಯಾದ, ಎರಡೂವರೆ ಅಡಿ ಅಗಲದ ಮರದ ಹಲಗೆಯ ಮೇಲೆ ನಾನು ಮತ್ತು ನನ್ನಕ್ಕ ಒಟ್ಟಾಗಿ ಮಲಗುತ್ತಿದ್ದೆವು. ಇಬ್ಬರ ತಲೆಗಳೂ ಒಂದೇ ದಿಂಬಿನ ಮೇಲಿರುತ್ತಿದ್ದವು. ನನ್ನ ಈ ಸ್ವಂತ ಅಕ್ಕ ಗುಣಾಳನ್ನು ನಾನು ನನ್ನ ಚಿಕ್ಕಪ್ಪ ಪದ್ಮೇಶ್ವರ್ ಮಗಳೆಂದು ತಪ್ಪಾಗಿ ತಿಳಿದಿದ್ದೆ. ಹಳ್ಳಿಯ ಜನರೂ ಅವಳನ್ನು ಹಾಗೆಂದೇ ಗೇಲಿ ಮಾಡುತ್ತಿದ್ದರು. ಯಾಕೆಂದರೆ, ಅವಳು ಪದ್ಮೇಶ್ವರ್ ಚಿಕ್ಕಪ್ಪನ ಹಾಗೆಯೇ ಬೆಳ್ಳಗಿದ್ದಳು, ಅವರ ಹಾಗೆಯೇ ಅವಳಿಗೆ ಹೊಂಗೂದಲಿತ್ತು. ಅವಳು ನನ್ನ ಹೃದಯಕ್ಕೆ ತುಂಬ ಹತ್ತಿರವಾಗಿದ್ದಳು ಮತ್ತು ಅವಳು ಮಾಡುತ್ತಿದ್ದ ಚಿಕ್ಕಪುಟ್ಟ ಚಂದದ ಕೆಲಸಗಳಲ್ಲಿ ಮತ್ತು ಅವಳಿಗೆ ಇಷ್ಟವಾಗುವ ಅಡುಗೆ ಮಾಡುವುದರಲ್ಲಿ ನಾನೂ ಜೊತೆಗಿರುತ್ತಿದ್ದೆ. ಎಷ್ಟೋ ಕಾಲ ನಾನು ಅವಳನ್ನು ನನ್ನ ಸಂಬಂಧಿ ಎಂದೇ ತಿಳಿದಿದ್ದೆ. ಅವಳು ಯಾವಾಗ ಬೇಕಾದರೂ ನನ್ನನ್ನು ಬಿಟ್ಟು ಹೊರಟುಹೋಗಬಹುದೆಂದು ಹೆದರುತ್ತಿದ್ದೆ. ಆಟಪಾಟಗಳಿಂದ ಮೊದಲಾಗಿ, ಶಾಲೆಗೆ ಹೋಗುವವರೆಗೆ ಅವಳು ನನ್ನ ಜೊತೆಬಿಡದ ಸಂಗಾತಿಯಾಗಿದ್ದಳು. ರಾತ್ರಿ ನಿದ್ರೆಯಲ್ಲೂ ಅವಳ ಸೊಂಟದ ಮೇಲೆ ಒಂದು ಕಾಲು ಹಾಕಿಕೊಂಡೇ ಮಲಗುತ್ತಿದ್ದೆ. ಆ ಅಭ್ಯಾಸ ಈಗಲೂ ಹಾಗೆಯೇ ಉಳಿದಿದೆ. ಚಿಕ್ಕಪ್ಪ ಅವಳನ್ನು ದೂರ ಕರೆದುಕೊಂಡು ಹೋಗುವ ಬಗ್ಗೆ ಮಾತಾಡಿದಾಗ ನನ್ನ ಎದೆಬಡಿತ ಜೋರಾಗುತ್ತಿತ್ತು. ನನ್ನ ಇಡೀ ಮೈ ನಡುಗುತ್ತಿತ್ತು. ಅವಳನ್ನು ಕಳೆದುಕೊಳ್ಳುವ ನಿಗೂಢ ಭಯದ ಪರಿಣಾಮವಾಗಿ, ದನಿಕೊಡಲಾಗದ ದುಃಖ ನನ್ನನ್ನು ಎಡೆಬಿಡದೆ ಕಾಡುತ್ತಿತ್ತು. ರಾತ್ರಿಯ ಹೊತ್ತು ಅವಳು ನಿದ್ದೆ ಮಾಡಿದ ಮೇಲೆ, ನಾನು ಎದ್ದು ಕುಳಿತು ಸೀಮೆಎಣ್ಣೆ ದೀಪದ ಮಸುಕು ಬೆಳಕಿನಲ್ಲಿ ಅವಳನ್ನು ಅಡಿಯಿಂದ ಮುಡಿಯವರೆಗೆ ಬಹಳ ಪ್ರೀತಿಯಿಂದ ನೋಡುತ್ತಿದ್ದೆ. ಹೆದರಿ ಹಿಂಜರಿಯುತ್ತಲೇ ಅವಳ ಕೈ, ಕಾಲುಬೆರಳುಗಳನ್ನು ಮುಟ್ಟಿ ಸವರಿ ನೋಡಿ, ಅವು ನನ್ನ ಬೆರಳುಗಳನ್ನು ಹೋಲುತ್ತವೆಯೇ ಎಂದು ಪರಿಶೀಲಿಸುತ್ತಿದ್ದೆ. ಅಚ್ಚರಿಯೆಂದರೆ, ಅವಳ ಕಿರುಬೆರಳಿಗೂ ನನ್ನದಕ್ಕೂ ಹೋಲಿಕೆ ಇರುವುದನ್ನು ಆ ದಿನಗಳಲ್ಲಿಯೇ ನಾನು ಗಮನಿಸಿದ್ದೆ. ಇಬ್ಬರ ಬೆರಳುಗಳೂ ಪುಟ್ಟ ಗುಡ್ಡದ ಹಾಗೆ ನಿಮಿರಿ ನಿಲ್ಲುತ್ತಿದ್ದವು. ನನ್ನ ಕಿರುಬೆರಳಿನಿಂದ ಅವಳ ಬೆರಳುಗಳನ್ನು ಮೃದುವಾಗಿ ಹೌದೋ ಇಲ್ಲವೋ ಎನ್ನುವಂತೆ ಸ್ಪರ್ಶಿಸುತ್ತಿದ್ದೆ. ಅವಳಿಗೆ ಎಚ್ಚರವಾಗದಂತೆ, ನಿಧಾನವಾಗಿ, ಹುಷಾರಾಗಿ ನನ್ನ ಮೂಗಿನಿಂದ ಅವಳ ಮೂಗನ್ನು ಉಜ್ಜುತ್ತಿದ್ದೆ. ಒಂದು ದಿನ ಹೀಗೆ ಮಾಡುವಾಗ, ನನ್ನಕ್ಕ ನಿದ್ರೆಯಲ್ಲಿ ಹಠಾತ್ತನೆ ಹೊರಳಿದಳು. ಭಯಗೊಂಡು ನಾನು ಕಣ್ಣೀರು ಸುರಿಸುತ್ತ ಜೋರಾಗಿ ಅಳತೊಡಗಿದೆ. ಅವಳು ಎಚ್ಚರಗೊಂಡು ನನ್ನ ಜೊತೆ ಸೇರಿಕೊಂಡಳು. 'ಏನಾಯ್ತು ಮರೀ, ಏನಾಯ್ತಪ್ಪ...' ಎಂದು ಕೇಳಿದಳು. ನನಗೆ ಯಾಕೆ ಅಳು ಬಂತೆಂದು ಈಗಲೂ ಗೊತ್ತಿಲ್ಲ. ಅದು ಚಿಕ್ಕ ಮಕ್ಕಳಿಗೆ ಸಹಜವಾದ ತರ್ಕಕ್ಕೆ ನಿಲುಕದ ಸಾವಿನ ಭಯವಿರಬೇಕು. ಅವಳನ್ನು ಕಳೆದುಕೊಳ್ಳುವ ಭಯ ನನ್ನೊಳಗೆ ಆಳವಾಗಿ ಬೇರುಬಿಟ್ಟಿರಬೇಕು. ಆ ಭಯದಿಂದ ಬಿಡುಗಡೆ ಪಡೆಯಲೆಂದು ನನಗೆ ನಾನೇ ಪಿಸುಗುಟ್ಟಿಕೊಳ್ಳುತ್ತಿದ್ದೆ, ಬೇಡಿಕೊಳ್ಳುತ್ತಿದ್ದೆ: ಓ... ಸೂರ್ಯ ಚಂದ್ರರೇ, ಇವಳನ್ನು ನೀವು ನನ್ನಿಂದ ದೂರ ಕೊಂಡೊಯ್ಯಬಾರದು. ಇದಕ್ಕೆ ಪ್ರತಿಯಾಗಿ ನಿಮಗೆ ಏನು ಬೇಕಾದರೂ ಕೊಡುತ್ತೇನೆ.

2

ಒಮ್ಮೆ ಪೂಜಾರಿಯೊಬ್ಬರು ಹೇಳಿದರು: 'ಈ ಲೋಕದಲ್ಲಿ ಇವಳ ದಿನಗಳು ಮುಗಿಯುತ್ತಿವೆ.